ಆ) – ಇಲ್ಲ –

ಇ) ಶಿವಮೊಗ್ಗ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ನಗರ ವ್ಯಾಪ್ತಿ ಹಾಗೂ ನಗರ ಪರಿಮಿತಿಯಿಂದ 5 ಕಿ ಮೀ ವ್ಯಾಪ್ತಿಯಲ್ಲಿ 2907 ಜನರು 5480 00 ಎಕರೆ ಜಮೀನನ್ನು ಅನಧಿಕೃತ ಸಾಗುವಳಿ ಮಾಡುತ್ತಿರುತ್ತಾರೆ

ಈ) ಸರ್ಕಾರದ ಸುತ್ತೋಲೆ ಸಂ ಆರ್‌ಡಿ.57 ಎಲ್‌ಜಿಪಿ 2001, ದಿನಾಂಕ 19–12–2001ರಂತೆ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವ ರಿಟ್ ಅರ್ಜಿ ಸಂ 25310 01ರಲ್ಲಿನ ಅಂತಿಮ ತೀರ್ಪಿಗೆ ಒಳಪಟ್ಟಿರುವುದಂದು ಷರತ್ತು ವಿಧಿಸಿ ಸಕ್ರಮೀಕರಣಗೊಳಿಸಲು ಅವಕಾಶವಿರುತ್ತೆ

ಬೆಂಗಳೂರು ಮಹಾನಗರ ಪಾಲಿಕೆಯ ಚಂದ್ರಾಲೇಔಟ್ ವಾರ್ಡಿನಲ್ಲಿ ಕಳಪೆ ಪುಟ್‌ಪಾತ್ ಕಾಮಗಾರಿ

579 (813) ಶ್ರೀ ಆರ್ ಅಶೋಕ್ (ಉತ್ತರಹಳ್ಳಿ) ಮಾನ್ಯ ಬೆಂಗಳೂರು ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ಮಹಾನಗರ ಪಾಲಿಕೆಯ ಚಂದ್ರಾ ಲೇಔಟ್ ವಾರ್ಡಿನಲ್ಲಿ ಫುಟ್‌ಪಾತ್ ಕಾಮಗಾರಿಯು ಕಳಪೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಕಳಪೆ ಕಾಮಗಾರಿಯಾಗಿರುವುದರ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ರಾಮಲಿಂಗರೆಡ್ಡಿ (ಬೆಂಗಳೂರು ಅಭಿವೃದ್ಧಿ ಸಚಿವರು)

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಸಾರಿಗೆ ಇಲಾಖೆಯಲ್ಲಿ ನಡೆದಿರುವ ಭ್ರಷ್ಟ ಅಧಿಕಾರಿಗಳ ವಿವರ

612 (851) ಶ್ರೀ ಗುರುಸ್ವಾಮಿ ಎ ಎಸ್ (ಚಾಮುಂಡೇಶ್ವರಿ) ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ ಎರಡು ವರ್ಷಕ್ಕೆ ಸಂಬಂಧಿಸಿದಂತೆ ಸಾರಿಗೆ ಇಲಾಖೆಯ ಅಧಿಕಾರಿಗಳು ಲೋಕಾಯುಕ್ತರ ದಾಳಿಗೆ ಸಿಕ್ಕಿಬಿದ್ದಿದ್ದಾರೆ, ಅದೇ ರೀತಿಯಲ್ಲಿ ಸಿಕ್ಕಿ ಬಿದ್ದಿರುವವರು ಅಮಾನತ್ತು ಆಗಿದ್ದಾರೆಯೇ

ಆ) ಇವರು ಆದಾಯಕ್ಕಿಂತ ಅಕ್ರಮವಾಗಿ ಆಸ್ತಿಯನ್ನು ಗಳಿಸಿದ್ದಾರೆಯೇ ಹಾಗಿದ್ದಲ್ಲಿ, ಇವರ ಸಂಖ್ಯೆ ಎಷ್ಟು

ಇ) ಅಕ್ರಮವಾಗಿ ಆಸ್ತಿ ಗಳಿಸಿರುವವರನ್ನು ಲೋಕಾಯುಕ್ತರು ಪತ್ತೆ ಹಚ್ಚಿದ್ದಾರೆಯೇ ಹಾಗಿದ್ದಲ್ಲಿ, ಈ ಅಧಿಕಾರಿಗಳು ಯಾರು

ಈ) ಇಲಾಖೆಯಲ್ಲಿ ಆದಾಯವಿದ್ದರೂ ನಷ್ಟವನ್ನು ಅನುಭವಿಸುತ್ತಿರಲು ಕಾರಣವೇನು

ಉ) ಮೈಸೂರು ಜಿಲ್ಲೆಯಲ್ಲಿ ಹೆಚ್ಚುವರಿಯಾಗಿ ಹಾಕಿರುವ ಬಸ್ ಮಾರ್ಗಗಳು ಎಷ್ಟು ಬೇಡಿಕೆಯಿರುವ ಬಸ್ ಮಾರ್ಗಗಳು ಎಷ್ಟು ಅದಕ್ಕೆ ಯಾವ ಕ್ರಮವನ್ನು ಕೈಗೊಳ್ಳಲಾಗಿದೆ?